ಕಾಡಿಗೆ ಕಣ್ಣು

**ಕಲೀಮ್ ಉಲ್ಲಾ**



# ವಿಷ ತಿಂದ ಮಲೆದಾಸ ಮಂಗಟ್ಟೆ

ವಿಶಾಲ ತಿಳಿ ನೀರ ಹರಿವಿನ ನದಿಯ ಇಕ್ಕೆಲಗಳ ಕಾಡಿನಲ್ಲಿ ರಾತ್ರಿ ಕಳೆಯುವುದನ್ನು ಮಂಗಟ್ಟೆ ಇಷ್ಟಪಡುತ್ತವೆ. ಅಚ್ಚರಿ ಎಂದರೆ ಇಡೀ ಜೀವನದಲ್ಲಿ ಒಮ್ಮೆಯೂ ಇವು ನೀರನ್ನು ಕುಡಿಯುವುದಿಲ್ಲವಂತೆ. ಹಣ್ಣಿನ ರಸಾಂಶದಲ್ಲಿರುವ ನೀರೇ ಇದರ ಬದುಕು. ನೀರನ್ನು ಸೇವಿಸದೇ ಬಾಳುವ ಈ ಹಕ್ಕಿ ನೀರಿನಲ್ಲಿ ಕೂಡ ಎಂದಿಗೂ ಸ್ನಾನವನ್ನೂ ಮಾಡುವುದಿಲ್ಲ.

ಸಂಜೆಯಾದರೆ ಹಣ್ಣು ತಿನ್ನಲು ದೂರ ಹೋದ ಈ ಜೋಡಿ ಹಕ್ಕಿಗಳು ಇಲ್ಲಿಗೆ ವಾಪಸ್ಸು ಬರುತ್ತವೆ. ನದಿಯ ಕಿನಾರೆ ಎಂದರೆ ಮಲೆದಾಸ ಮಂಗಟ್ಟೆ ಹಕ್ಕಿಗಳಿಗೆ ಬಲು ಇಷ್ಟವಂತೆ. ಇದು ಗೊತ್ತಿದ್ದೇ ಈ ದಿನ ಕಾಳಿ ನದಿ ಸೇತುವೆ ಮೇಲೆ ಪಟಗಾರರೆಲ್ಲಾ ಟೆಂಟು ಹಾಕಿದ್ದೇವೆ. ನಿಮಗೆಲ್ಲಾ ಗೊತ್ತಿರುವಂತೆ ಈ ಹಕ್ಕಿಯ ನಾಲ್ಕು ಪ್ರಭೇದಗಳು ನಮ್ಮ ನಾಡಿನಲ್ಲಿವೆ. ಇವುಗಳನ್ನು ಬೂದು ಮಂಗಟ್ಟೆ, ಮಲೆ ಮಂಗಟ್ಟೆ, ಮಲೆದಾಸ ಮಂಗಟ್ಟೆ, ಹಾಗೂ ದಾಸ ಮಂಗಟ್ಟೆ ಎನ್ನಲಾಗಿದೆ. ಮಂಗಟ್ಟೆಗೆ ಓಂಗಿಲೆ ಎಂಬ ವಿಶೇಷ ಹೆಸರೂ ಇದ್ದಂತಿದೆ. ಪ್ರಾಯಶಃ ಕೋಗಿಲೆಯಂತೆ ಕಾಣುವ ಕಾರಣಕ್ಕೆ ಜನ ಹೀಗೆ ಕರೆದಿರಬಹುದೇನೋ?

ಹಕ್ಕಿಜಾತಿಯಲ್ಲೇ ಸೂಕ್ಷ್ಮ ಪ್ರವೃತ್ತಿಯ ಜೀವವಿದು. ಕಾಡು ನಾಶವಾದಂತೆ ಇದೂ ಸದ್ದಿಲ್ಲದೆ ಕಡಿಮೆಯಾಗುತ್ತಿದೆ. ಈ ಹಕ್ಕಿ ವಾಸ ಮಾಡುತ್ತಿದೆ ಎಂದರೆ ಅದು ಜೀವವೈವಿಧ್ಯತೆಯ ಸಂಪದ್ಭರಿತ ಕಾನನವೆಂದೇ ಅರ್ಥ. ನೂರೈವತ್ತಕ್ಕೂ ಹೆಚ್ಚಿನ ಹಣ್ಣಿನ ಗಿಡಗಳು ಕಾಡಿನಲ್ಲಿ ಹುಟ್ಟಿ ಬೆಳೆಯುವುದು ಇದರ ಇರುವಿಕೆಯಿಂದ. ಒಂದರ್ಥದಲ್ಲಿ ವನದ ಹಣ್ಣಿನಂಗಡಿ ಮಾಲೀಕನೀತ. ಇದರ ಬದುಕಿನ ರೀತಿ, ಹಾರಾಟದ ಶೈಲಿ, ನಿಷ್ಠೆಯ ದಾಂಪತ್ಯದ ಕಥೆ ಸಾಕಷ್ಟು ವಿಸ್ಮಯವಾಗಿದೆ. ಮಲೆದಾಸ ಮಂಗಟ್ಟೆಯ ಹಾರುವ ಚಿತ್ರ ಈ ದಿನ ತೆಗೆಯಬಹುದು ಎಂದುಕೊಂಡಿದ್ದೇವೆ. ಆದರೆ ನದಿ ಬಯಲಲ್ಲಿ ಸಣ್ಣಗೆ ಕತ್ತಲು ಆವರಿಸುತ್ತಿದೆ. ಸೂರ್ಯ ಮುಳುಗಲು ಶುರುವಾಗಿ ಬಿಟ್ಟ ಎಂದರೆ ನಮ್ಮ ಪಾಲಿಗದು ಫಜೀತಿ. ಬೆಳಕಿನ ಲಭ್ಯತೆ ಹೆಚ್ಚಿದ್ದರಷ್ಟೇ ಹಾರುವ ಹಕ್ಕಿಯ ಚಿತ್ರ ತೆಗೆಯಲು ಸಾಧ್ಯವಾಗುವುದು. ಅದೇನೋ ಗೊತ್ತಿಲ್ಲ. ಪಟಗಾರನ ಆಸೆ, ಆಮಿಷಗಳು ಬಾಕಿ ಇರುವಾಗಲೇ ಪುಣ್ಯಾತ್ಮ ಸೂರ್ಯಣ್ಣ ಅಂಗಡಿ ಕದವ ಎಳೆದು ಬಿಡುತ್ತಾನೆ.

ಯಾವ ದಿಕ್ಕಿಗೆ ಕ್ಯಾಮೆರಾ ಮುಖ ತಿರುಗಿಸಿ ಹಿಡಿದರೆ ಲಾಭವೆಂಬುದೂ ನಮಗೆ ಗೊತ್ತಾಗಿದೆ. ಪೂರ್ವದ ಕಡೆಯಿಂದ ಅವು ಯಾವ ಕ್ಷಣದಲ್ಲಾದರೂ ಬರಬಹುದು. ಸ್ವಭಾವತಃ ಪಕ್ಷಿಗಳು ಸೂರ್ಯ ಮುಳುಗುವ ದಿಕ್ಕಿನ ಕಡೆಗೇ ಸಂಜೆಯ ಹೊತ್ತಿಗೆ ಮರಳುತ್ತವೆ. ಹೌದು. ನಾವು ನಿರೀಕ್ಷೆ ಮಾಡಿದಂತೆ ಮಂಗಟ್ಟೆಗಳು ಕೂಗುತ್ತಾ ನದಿಯ ಮೇಲೆ ಹಾರಿ ಬಂದವು. ಆದರೆ ಚಿತ್ರಗಳನ್ನು ತೆಗೆಯಲು ಆಗಲಿಲ್ಲ. ಕೇವಲ ನೋಡಿ ಸಂತಸ ಹಂಚಿಕೊಂಡೆವು.ಈ ಹಕ್ಕಿಗಳ ಹಾರಾಟದ ವೈಖರಿಯೇ ಒಂದು ಸೊಬಗು. ರೆಕ್ಕೆಗಳು ಹೆಲಿಕಾಪ್ಟರ್ ತರಹ ಬುರುಬುರು ಎಂದು ಶಬ್ದ ಮಾಡುತ್ತವೆ.